ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ತಾವು ಕನ್ನಡದಲ್ಲಿ ಹೇಳಲಿಕ್ಕೆ ಮಂತ್ರಿಗಳಿಗೆ ಹೇಳಬೇಕು.

ಶ್ರೀ ಅಜೀಜ್‌ಸೇಟ್.—ಅಧ್ಯಕ್ಷರೆ, ನನಗೆ ಓದಲಿಕ್ಕೆ, ಬರೆಯಲಿಕ್ಕೆ ಬರದೇ ಇರುವಾಗ ನಾನು ಯಾವ ರೀತಿ ಓದಿ ಹೇಳಲಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅಧ್ಯಕ್ಷರೆ. ನಾವು ಕನ್ನಡದ ಪ್ರೇಮಿಗಳೆ, ಈ ತರಹ ಒತ್ತಾಯ ಮಾಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿ.ಎಲ್. ಪಾಟೀಲ್.—ಅಧ್ಯಕ್ಷರೆ ಲಿಖಿತ ಮೂಲಕ ಉತ್ತರ ಬಯಸಿದ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಸಭೆಯ ಮುಂದಿಡುತ್ತಿದ್ದೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ವಿ.ಎಲ್. ಪಾಟೀಲ್.—ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರತಕ್ಕ ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಹಂಕ್ಯೇರಿ ತಾಲ್ಲೂಕಿನಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪಿಸುವುದು

ಶ್ರೀ ಮಲ್ಲಾರಗೌಡ, ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಪ್ರಚಾರ ಹಾಗೂ ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಗುಡ್ಡದ ಮೇಲೆ ದೂರದರ್ಶನ ಕೇಂದ್ರವನ್ನು ಸ್ಥಾಪಿಸಲು ಸಮೀಕ್ಷೆಯನ್ನು ನಡೆಸುವುದಕ್ಕಾಗಿ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು ?

ಆ) ಸಂಕೇಶ್ವರ ಗದಹಿಂಗ್ಲಜ, ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಹಾಗೂ ಈ ಸುತ್ತ ಮುತ್ತಲಿನ ಗ್ರಾಮೀಣ ಜನರಿಗೆ ದೂರದರ್ಶನ ಸೌಲಭ್ಯವನ್ನು ಒದಗಿಸಲು ಸರ್ಕಾರದಿಂದ ತೆಗೆದುಕೊಳ್ಳುವ ಕ್ರಮವೇನು ?

ಇ) ಶಿಫ್ಟಾರ ಹತ್ತಿರ ಸಮೀಕ್ಷೆ ನಡೆಸಲಿಕ್ಕೆ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು ?

ಈ) ದೂರದರ್ಶನ ಕೇಂದ್ರಕ್ಕಾಗಿ ಸಮೀಕ್ಷೆಯನ್ನು ನಡೆಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಪತ್ರ ವ್ಯವಹಾರವನ್ನು ಮಾಡುವಲ್ಲಿ ವಿಳಂಬವಾಗಿದ್ದಕ್ಕೆ ಕಾರಣವೇನು ?

ಶ್ರೀ ಎಂ, ರಘುಪತಿ (ವಾರ್ತಾ. ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಇಂತಹ ಸಮೀಕ್ಷೆ ನಡೆಸುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ.

ಆ) ಈ ಸ್ಥಳದಲ್ಲಿ ದೂರದರ್ಶನ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಇ) ಸಮೀಕ್ಷೆ ನಡೆಸುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ.

ಈ) ಬೆಳಗಾವಿಯಲ್ಲಿ ಕಡಿಮೆ ಶಕ್ತಿ ದೂರದರ್ಶನ ಸ್ಥಾಪನೆಗೆ ಕೇಂದ್ರ ಸರ್ಕಾರ ಒಪ್ಪಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕಿನ ಹಂಚ್ಯೋ ಮನೆಗಳ ಯೋಜನೆ

*೫೬ ಶ್ರೀ ಕೆ.ಎಸ್. ಕಾಳಮರಿ ಗೌಡ (ಪಿರಿಯಾ ಪಟ್ಟಣ).ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ನಿರ್ಗತಿಕರು ಮತ್ತು ಸಣ್ಣ ಪಿಡುಪಳಿದಾರರಿಗೆ ಜನತಾ ಮನೆಗಳನ್ನು ನೀಡುವ ಯೋಜನೆಯಲ್ಲಿ ಎಷ್ಟು ಜನಗಳು ಗೋಡೆಗಳನ್ನು ಹಾಕಿಕೊಂಡಿದ್ದಾರೆ ? ಇದರಲ್ಲಿ ಎಷ್ಟು ಮನೆಗಳಿಗೆ ಮರದ ಸಾಮಾನು ಮತ್ತು ಹೆಂಚುಗಳನ್ನು ಒದಗಿಸಲಾಗಿದೆ. ಬಾಕಿ ಮನೆಗಳಿಗೆ ಯಾವಾಗ ಹೆಂಚು ಮತ್ತು ಮರದ ಸಾಮಗ್ರಿಗಳನ್ನು ಕೊಡಲಾಗುವುದು ?

ಶ್ರೀ ಎ ಲಕ್ಷ್ಮೀಸಾಗರ್ (ವಸತಿ ಮಂತ್ರಿಗಳು).—೧೯೮೩-೮೪ರಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ೨೮೫ಹಾಗೂ ಮೈಸೂರು ಜಿಲ್ಲೆಯಲ್ಲಿ ೩೧೬೦ ಫಲಾನುಭವಿಗಳು ಜನತಾ ಯೋಜನೆಯಲ್ಲಿ ಗೋಡೆಗಳನ್ನು ಹಾಕಿ ಕೊಂಡಿದ್ದಾರೆ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇಷ್ಟರವರೆಗೆ ಯಾವ ಫಲಾನುಭವಿಗೂ ಹೆಂಚು ಮತ್ತು ಮರದ ಸಾಮಗ್ರಿಗಳನ್ನು ಒದಗಿಸಲಿಲ್ಲ.

ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಇದುವರೆಗೆ ಒಟ್ಟು ೧೨೧೮ ಫಲಾನುಭವಿಗಳಿಗೆ ಮರದ ಸಾಮಾನು ಮತ್ತು ಹೆಂಚನ್ನು ಒದಗಿಸಲಾಗಿದೆ. ಉಳಿದವರಿಗೆ ಸಾಧ್ಯವಾದಷ್ಟು ಶೀಘ್ರದಲ್ಲೇ ಹೆಂಚು ಮತ್ತು ಮರ ಮುಟ್ಟುಗಳನ್ನು ಒದಗಿಸಲಾಗುವುದು.

ತಿಪಟೂರಿನಿಂದ ಬೆಂಗಳೂರಿಗೆ ಬಸ್ಸನ್ನು ಓಡಿಸುವುದು

೧೬೯ ಶ್ರೀ ಎಸ್.ಪಿ. ಗಂಗಾಧರಪ್ಪ (ತಿಪಟೂರು).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ತಿಪಟೂರಿನಿಂದ ಬೆಂಗಳೂರಿಗೆ ತಿಪಟೂರಿನಿಂದಲೇ ಹೊರಡುವ ಬಸ್ಸು ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತಿಪಟೂರಿನಿಂದ ಬೆಂಗಳೂರಿಗೆ ನೇರವಾಗಿ ಬಸ್ಸೊಂದನ್ನು ಹೊರಡಿಸಲು ಸರ್ಕಾರದವರು ಕೈಗೊಂಡಕ್ರಮವೇನು ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತಿಪಟೂರಿನಿಂದ ಕಾಣಿಗಲ್ ಮಾರ್ಗವಾಗಿ ಬೆಂಗಳೂರಿಗೆ ಈ ಕೆಳಗೆ ಕಾಣಿಸಿರುವ ವೇಳೆಯ ಪ್ರಕಾರ ಬಸ್ಸು ಸೌಲಭ್ಯ ಒದಗಿಸಿದೆ.

೨೦೪೫	ತಿಪಟೂರು	೦೭೧೫
೧೭೫೫	ಕಾಣಿಗಲ್	೧೮೦೫
೧೭೪೫	ಕಾಣಿಗಲ್	೧೦೧೦
೧೫೩೦	ಬೆಂಗಳೂರು	೧೨೩೦

ಆ) ಹೆಚ್ಚು ಪ್ರಯಾಣಿಕರ ಒತ್ತಡ ಕಂಡುಬಂದಲ್ಲಿ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯು ತಿಪಟೂರಿನಿಂದ ತುಮಕೂರು ಮಾರ್ಗವಾಗಿ ಬೆಂಗಳೂರಿಗೆ ನೇರ ಬಸ್ ಸೌಕರ್ಯ ಕಲ್ಪಿಸುವುದು.

PAPERS LAID ON THE TABLE

SRI, V. L. PATIL (Minister for Revenue).—Mr. Speaker I beg to lay.—

1. Notification No. RD 12 TRM 83 dated 22nd November 1983

Remission of land revenue in respect of 233 villages of Nagamangala Taluk for the year 1980-1981.